# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority

ಸಂಖ್ಯೆ : ಬೆಂ.ಅ.ಪ್ರಾ/ನಮ/ಅ.ಸ/ಅ.ಅ–3/ತಾ.ಸ–4/ಪೂ/31/2018–19
No. :

ದಿನಾಂಕ : 12.10.2018
Date :

ಅನುಸೂಚಿ–ಎ 5
(ಉಪವಿಧಿ ಸಂಖ್ಯೆ:4.1)
## ನಕ್ಷೆ ಮಂಜೂರಾತಿ ಪತ್ರ

ಅಭಿಯಂತರ ಸದಸ್ಯರವರ ಕಛೇರಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

ನಕ್ಷೆಯು ಮಾನ್ಯ ಆಯುಕ್ತರ ಆದೇಶ ಸಂಖ್ಯೆ: 3678, ದಿನಾಂಕ: 06.10.2018 ರಂದು ಅನುಮೋದನೆಯಾಗಿರುತ್ತದೆ. "ಬಹುಮಹಡಿ ವಸತಿ ಕಟ್ಟಡ –2 (ವಿಂಗ್–5) ರಲ್ಲಿನ ವಿಂಗ್–ಜೆ ಮತ್ತು ವಿಂಗ್–ಕೆ ರಲ್ಲಿ ತಳ+ನೆಲ+28 ಮೇಲಂತಸ್ತುಗಳನ್ನೊಳಗೊಂಡ ಒಟ್ಟು 345 ವಸತಿ ಘಟಕಗಳು ಹಾಗೂ ನೆಲ+01 ಮೇಲಂತಸ್ತುಗಳಲ್ಲಿ ಕ್ಲಬ್ ಹೌಸ್"

ಶ್ರೀಮತಿ/ಶ್ರೀ

**M/s Assetz Whitefield Homes Pvt ltd.,**
ನಂ. 2/1, ಎಂಬಾಸ್ಸಿ ಐಕಾನ್ ಅನೆಕ್ಸ್,
2ನೇ ಮಹಡಿ, ಇನ್ಫ್ಯಾಂಟ್ರಿ ರಸ್ತೆ,
ಬೆಂಗಳೂರು 560001

ಮಾನ್ಯರೆ,

ನೀವು ದಿನಾಂಕ: 29.08.2018 ರಲ್ಲಿ ಈ ಕಛೇರಿಗೆ ಅರ್ಜಿ ಸಲ್ಲಿಸಿ **ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕನ್ನಮಂಗಲ ಗ್ರಾಮದ ಸರ್ವೆ ನಂ. 159/1, 159/2, 160/1, 167/1, 167/2, 167/3, 167/4, 168/1, 168/2, 169/1, 169/2, 169/3, 169/4 ಮತ್ತು 171 ರಲ್ಲಿನ ಕಟ್ಟಡ–2 (ವಿಂಗ್–5) ರಲ್ಲಿ ವಿಂಗ್–ಜೆ ಮತ್ತು ವಿಂಗ್–ಕೆ ರಲ್ಲಿ ತಳ+ನೆಲ+28 ಮೇಲಂತಸ್ತುಗಳನ್ನೊಳಗೊಂಡ ಒಟ್ಟು 345 ವಸತಿ ಘಟಕಗಳು ಹಾಗೂ ನೆಲ+01 ಮೇಲಂತಸ್ತುಗಳಲ್ಲಿ ಕ್ಲಬ್ ಹೌಸ್ ಒಳಗೊಂಡಂತೆ ಬಹುಮಹಡಿ ವಸತಿ ಕಟ್ಟಡವನ್ನು** ನಿರ್ಮಿಸಲು ಕಟ್ಟಡ ನಕ್ಷೆಗೆ ಮಾನ್ಯ ಆಯುಕ್ತರವರ ಕಛೇರಿ ಆದೇಶದ ಸಂಖ್ಯೆ: **3678**, ದಿನಾಂಕ: **06.10.2018** ರಂದು ಅನುಮೋದನೆ ನೀಡಿದ್ದು, ನಿರ್ಮಾಣದಾರರು ಚಲನ್ ಸಂಖ್ಯೆ: **24889**, ದಿನಾಂಕ: 10.10.2018 ರಂದು ರೂ. **1,73,55,356/–** ಗಳನ್ನು ಪಾವತಿಸಿರುತ್ತಾರೆ. ಅದರಂತೆ ದಿನಾಂಕ: **12.10.2018** ರಲ್ಲಿ ನಕ್ಷೆ ಮಂಜೂರಾತಿ ಮಾಡಲಾಗಿದೆ. ದಿನಾಂಕ: **12.10.2018** ರಿಂದ ದಿನಾಂಕ: **11.10.2020** ವರೆಗಿನ ಎರಡು ವರ್ಷಗಳ ಅವಧಿಗೆ ಮಾತ್ರ ಮಾನ್ಯತೆ ಪಡೆದಿರುತ್ತದೆ. ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಮಂಜೂರಾತಿ ಮಾಡಲಾಗಿದೆ ಎಂದು ಈ ಮೂಲಕ ನಾನು ತಿಳಿಯಪಡಿಸಿದ್ದೇನೆ.

### ಷರತ್ತುಗಳು

1) ಪ್ರಾಧಿಕಾರದ ಮಂಜೂರಾದ ನಕ್ಷೆಯ ಪ್ರತಿಯನ್ನು ಕಟ್ಟಡ ನಿರ್ಮಾಣ ಮಾಡುವ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.
2) ಸಂಬಂಧಪಟ್ಟ ಪ್ರಾಧಿಕಾರದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರಿಗೆ ಅರ್ಜಿ ಸಲ್ಲಿಸಿ ಪ್ರಾರಂಭ ಮಾಡಲು ಸೂಕ್ತ ಅನುಮತಿ ಪತ್ರ ಪಡೆಯತಕ್ಕದ್ದು.
3) ಮಂಜೂರಾತಿಯಾದ ನಕ್ಷೆಯ ಪ್ರಕಾರ ಕಟ್ಟಡ ನಿರ್ಮಾಣ ಮಾಡತಕ್ಕದ್ದು.
4) ಪೂರ್ಣಗೊಂಡ ಕಟ್ಟಡ ಅಥವಾ ಮನೆಯನ್ನು ವಾಸಕ್ಕೆ ಉಪಯೋಗಿಸುವ ಮೊದಲು ಸಂಬಂಧಪಟ್ಟ ಅಧಿಕಾರಿಗಳಿಂದ (ಪ್ರಾಧಿಕಾರದ) ವಾಸಯೋಗ್ಯ ಅನುಮತಿ ಪತ್ರವನ್ನು ಪಡೆಯತಕ್ಕದ್ದು.
5) ನಿವೇಶನದ ಸುತ್ತಳತೆಯಲ್ಲಿ ಹಸಿರು ಸಸಿಗಳನ್ನು ನೆಡುವುದು.
6) ಇವುಗಳೊಂದಿಗೆ ಈ ಪುಟದ ಹಿಂಬಾಗದಲ್ಲಿ ನಮೂದಿಸಿರುವ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

ಅಡಕ: ಅನುಸೂಚಿ 2,6 ಹಾಗೂ 8
ಲಗತ್ತಿಸಿದೆ.

ಪುಟ ಸಂಖ್ಯೆ: 2 ಕ್ಕೆ ಮುಂದುವರೆದಿದೆ...

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–560 020.
T. Chowdaiah Road, Kumarapark West, Bangalore - 560 020. Facsimile : 2334 5799, E-mail :bda@vsnl.com

# -: ಷರತ್ತುಗಳು:-

1) **ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಕನ್ನಮಂಗಲ ಗ್ರಾಮದ ಸರ್ವೆ ನಂ. 159/1, 2, 160/1, 167/1, 2, 3, 4, 168/1, 2, 169/1, 2, 3, 4 ಮತ್ತು 171 ರಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ವತಿಯಿಂದ ಭೂಸ್ವಾಧೀನಪಡಿಸಿ ಹಂಚಿಕೆ ಮಾಡಿರುವ 28 ಎಕರೆ 12 ಗುಂಟೆ ವಿಸ್ತೀರ್ಣದ ಪೈಕಿ ಖರಾಬು 14 ಗುಂಟೆ ಹೊರತುಪಡಿಸಿ ಉಳಿಕೆ 27 ಎಕರೆ 27.60 ಗುಂಟೆ ಜಮೀನಿನ ಪ್ರದೇಶದಲ್ಲಿ** ವಸತಿ / ವಸತಿಯೇತರ ವಾಣಿಜ್ಯ ಉದ್ದೇಶಕ್ಕೆ ಮಾರ್ಪಾಡಿತ ಅಭಿವೃದ್ಧಿ ಯೋಜನಾ ಕಟ್ಟಡದ ನಕ್ಷೆಗೆ ಪ್ರಾಧಿಕಾರದ ಸಮಿತಿ ಸಭೆಯ ಠರಾವು ಸಂಖ್ಯೆ: 179/2013, ದಿನಾಂಕ: 22.10.2013 ರಲ್ಲಿ ಅನುಮೋದಿಸಲಾಗಿದ್ದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯಾದೇಶ ಸಂಖ್ಯೆ: **ಬೆಂ.ಅ.ಪ್ರಾ./ನಯೋಸ/ಡಿ.ಎಲ್.ಪಿ-16/2013-14/297/2018-19, ದಿನಾಂಕ: 21.05.2018** ರಲ್ಲಿ ಕ್ರಮ ಸಂಖ್ಯೆ: 01 ರಿಂದ 23 ರವರೆಗೆ ವಿಧಿಸಿರುವ ಎಲ್ಲಾ ಷರತ್ತುಗಳನ್ನು ಕಟ್ಟು ನಿಟ್ಟಾಗಿ ಪಾಲಿಸತಕ್ಕದ್ದು.

2) ಅನುಮೋದಿತ ಅಭಿವೃದ್ಧಿ ನಕ್ಷೆಯಲ್ಲಿ ಯಾವ ಉದ್ದೇಶಕ್ಕಾಗಿ ಗುರುತಿಸಿರುವ ಪ್ರದೇಶಗಳು ಅಂದರೆ ಉದ್ಯಾನವನ, ಬಯಲುಜಾಗ, ರಸ್ತೆಗಳು, ಸರ್ಫೇಸ್ ವಾಹನ ನಿಲುಗಡೆ ಪ್ರದೇಶಗಳನ್ನು ಬೇರೆ ಯಾವುದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದಲ್ಲ.

3) ಬಂಡಿದಾರಿ ಪಂಕ್ತೀಕರಣವನ್ನು **Entry** ಮತ್ತು **Exit** ಗಳನ್ನು ಯಥಾಸ್ಥಿತಿಯಲ್ಲಿಟ್ಟು ಬದಲಾವಣೆ ಮಾಡಿರುವ ಬಗ್ಗೆ ಕಂದಾಯ ಇಲಾಖೆಯ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯನ್ನು ಪಡೆದು ಸಲ್ಲಿಸುವ ಷರತ್ತಿಗೆ ಒಳಪಟ್ಟಿರುತ್ತದೆ ಇಲ್ಲವಾದಲ್ಲಿ ಸ್ವಾಧೀನಾನುಭವ ನೀಡಲಾಗುವುದಿಲ್ಲ.

4) ಸದರಿ ಪ್ರದೇಶದಲ್ಲಿ ಪೂರ್ವ-ಪಶ್ಚಿಮವಾಗಿ **H.T Line** ಹಾದು ಹೋಗುತ್ತಿದ್ದು, **H.T Line** ಅಂಚಿನಭಾಗದಿಂದ ಎರಡೂ ಬದಿಯಲ್ಲಿ 6.00 ಮೀ ಭಫರ್ ನ್ನು ಕಾಯ್ದಿರಿಸಿರುವ ಜಾಗವನ್ನು ಯಾವುದೇ ಉದ್ದೇಶದ ನಿರ್ಮಾಣಕ್ಕಾಗಿ ಉಪಯೋಗಿಸತಕ್ಕದ್ದಲ್ಲ.

5) ಸದರಿ ಜಮೀನಿನ ದಕ್ಷಿಣಭಾಗದ ಅಂಚಿನಲ್ಲಿ **Gas Pipe Line** ಹಾದು ಹೋಗುತ್ತಿದ್ದು, ಮಧ್ಯಭಾಗದಿಂದ 18.00 ಮೀ ಬಫರ್ ಬಿಟ್ಟು ಕಟ್ಟಡ ಪ್ರಾರಂಭಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

6) ಅಭಿವೃದ್ಧಿದಾರರು ಭದ್ರತಾ ಸಿಬ್ಬಂದಿಯವರನ್ನು ನೇಮಿಸಿ ಕಟ್ಟಡ ನಿರ್ಮಾಣದ ಪ್ರದೇಶದ ಒಳಗೆ ಹೋಗಲು ಮತ್ತು ಹೊರಗೆ ಬರಲು ವಾಹನ ಸಂಚಾರ ವ್ಯವಸ್ಥೆಯಲ್ಲಿ ಅಡಚಣೆ ಉಂಟಾಗದಂತೆ ವ್ಯವಸ್ಥೆ ಕಲ್ಪಿಸಿ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳತಕ್ಕದ್ದು, ಹಾಗೂ ವಾಹನ ತಪಾಸಣೆಗೆ ಮತ್ತು ಭದ್ರತಾ ವ್ಯವಸ್ಥೆಯನ್ನು ಸ್ವತ್ತಿನ ಒಳಭಾಗದಲ್ಲಿ ಅಳವಡಿಸಿ ನಿರ್ವಹಿಸುವುದು.

7) ಅರ್ಜಿದಾರರು ಶಾಸನಬದ್ಧ ಸಂಸ್ಥೆಗಳಿಗೆ, ಬಿಡಿಎ / ಬಿಬಿಎಂಪಿ / ನಗರ ಸಭೆ / ಪಂಚಾಯತ್ ಗೆ ಯಾವುದಾದರೂ ಬಾಕಿ ಶುಲ್ಕಗಳನ್ನು ಪಾವತಿಸಬೇಕಿದ್ದಲ್ಲಿ ಅಂತಹ ಸಂಸ್ಥೆಗಳು ವಿಧಿಸುವ ಶುಲ್ಕವನ್ನು ಪಾವತಿಸತಕ್ಕದ್ದು.

8) ಅರ್ಜಿದಾರರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕಾಲ ಕಾಲಕ್ಕೆ ವಿಧಿಸುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

9) ಮಳೆ ನೀರು ಕೊಯ್ಲನ್ನು ಬೆಂಗಳೂರು ಜಲ ಮಂಡಳಿ ರವರು ನಿಗಧಿಪಡಿಸಿರುವಂತೆ ಕಡ್ಡಾಯವಾಗಿ ಅಳವಡಿಸುವುದು.

10) ಇಬ್ಬಗೆಯ ಕೊಳವೆ ವಿಧಾನವನ್ನು ಕುಡಿಯುವ ನೀರಿಗಾಗಿ ಹಾಗೂ ಇತರೆ ಉದ್ದೇಶಿತ ವ್ಯವಸ್ಥೆಗಳಿಗಾಗಿ ಅಳವಡಿಸುವುದು.

11) ಒಳಚರಂಡಿ ವ್ಯವಸ್ಥೆಗಾಗಿ ಸ್ಥಾಪಿಸಿದ ನೈರ್ಮಲ್ಯ ಶುದ್ಧೀಕರಣ ಘಟಕವನ್ನು (S.T.P) ಅಳವಡಿಸಿ ಹಾಗೂ ಶುದ್ಧೀಕರಿಸಿದ ನೀರನ್ನು ಮನೆಗಳಲ್ಲಿನ ಶೌಚಾಲಯ, Gardening ಹಾಗೂ ಗಿಡಮರ Lawn ಗಳಿಗಾಗಿ ಕಡ್ಡಾಯವಾಗಿ ಉಪಯೋಗಿಸತಕ್ಕದ್ದು ಮತ್ತು ಇದರಿಂದ ಉತ್ಪತ್ತಿಯಾಗುವ Sewage ಪೂರ್ಣ ನೀರನ್ನು ಯಾವುದೇ ಕಾರಣಕ್ಕೂ ಕೆರೆ/ಹಳ್ಳ/ಕಣಿವೆ/ಹೊಳೆಗೆ ಬಿಡತಕ್ಕದಲ್ಲ.

12) ಅಭಿವೃದ್ಧಿದಾರರು ಕಟ್ಟಡದ ಆವರಣಗಳಲ್ಲಿ ಗಿಡ ಮರಗಳನ್ನು ಬೆಳೆಸಿ ಪರಿಸರವನ್ನು ಸಂರಕ್ಷಿಸುವ ಷರತ್ತಿಗೆ ಬದ್ಧರಾಗಿರತಕ್ಕದ್ದು.

13) ಅಭಿವೃದ್ಧಿದಾರರು ಕಟ್ಟಡಗಳಿಗೆ ಸೋಲಾರ್ ಉಪಕರಣಗಳನ್ನು ಅಳವಡಿಸಿಕೊಳ್ಳತಕ್ಕದ್ದು.

14) ಅಭಿವೃದ್ಧಿದಾರರು ಟ್ರಾನ್ಸ್ ಫಾರ್ಮರ್ ಗಾಗಿ ಗುರುತಿಸಿರುವ ಪ್ರದೇಶದಲ್ಲಿ ಅಳವಡಿಸತಕ್ಕದ್ದು, ಬೇರೆ ಯಾವುದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ.

ಪುಟ ಸಂಖ್ಯೆ: 3 ಕ್ಕೆ ಮುಂದುವರೆದಿದೆ...

15) ಅಭಿವೃದ್ಧಿದಾರರು ಕಟ್ಟಡದ ಸುರಕ್ಷತೆ ಹಾಗೂ ಭದ್ರತೆಯ, ಕಟ್ಟಡದ ರಚನಾತ್ಮಕ ವಿನ್ಯಾಸದ ಬಗ್ಗೆ ಸಂಪೂರ್ಣವಾಗಿ ಜವಬ್ದಾರರಾಗಿರತಕ್ಕದ್ದು. ಕಟ್ಟಡದ ರಚನಾತ್ಮಕ ವಿನ್ಯಾಸದ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯಾವುದೇ ರೀತಿಯ ಹೊಣೆಗಾರಿಕೆ ಮತ್ತು ಜವಾಬ್ದಾರಿಯನ್ನು ಹೊಂದಿರುವುದಿಲ್ಲ. ಕಟ್ಟಡ ನಿರ್ಮಾಣ ಸಮಯದಲ್ಲಿ ಕಟ್ಟಡ ನಿರ್ಮಾಣಕ್ಕೆ ಕಾರ್ಮಿಕರು ಹಾಗೂ ನಿರ್ಮಾಣದ ಬಗ್ಗೆ ಎಲ್ಲಾ ಸೂಕ್ತ ಕ್ರಮಗಳನ್ನು ಅಳವಡಿಸಿಕೊಳ್ಳತಕ್ಕದ್ದು, ನಿರ್ಮಾಣ ಸಮಯದಲ್ಲಿ ಯಾವುದೇ ತರಹದ ಅನಾಹುತ ಅಥವಾ ಪ್ರಾಣ ಹಾನಿಯಾಗದಂತೆ ಕಟ್ಟುನಿಟ್ಟಿನ ಎಚ್ಚರವಹಿಸತಕ್ಕದ್ದು. ಯಾವುದೇ ತರಹದ ಅನಾಹುತಕ್ಕೆ ಗುತ್ತಿಗೆ ಪಡೆದ ನಿರ್ಮಾಣದಾರರು ನೇರ ಜವಬ್ದಾರರಾಗಿರುತ್ತಾರೆ. ಅಂತಹ ಪ್ರಸಂಗ ಕಂಡುಬಂದಲ್ಲಿ ಕಾನೂನು ಕ್ರಮ ಜರುಗಿಸುವುದಲ್ಲದೆ ನೀಡಲಾಗಿರುವ ಮಂಜೂರಾತಿಯು ತಂತಾನೆ ರದ್ದಾಗುತ್ತದೆ.

16) ಅಭಿವೃದ್ಧಿದಾರರು ಕಟ್ಟಡ ನಿರ್ಮಾಣ ಸಮಯದಲ್ಲಿ ಕಟ್ಟಡ ನಿರ್ಮಾಣ ಸಾಮಗ್ರಿಗಳಿಂದಾಗಲೀ ಅಥವಾ ಇನ್ನಾವುದೇ ಕಟ್ಟಡದ ಅನುಪಯುಕ್ತ ಸಾಮಗ್ರಿಗಳಿಂದ ಸಾರ್ವಜನಿಕರಿಗೆ ಹಾಗೂ ಪರಿಸರಕ್ಕೆ ಯಾವುದೇ ತೊಂದರೆಯಾಗದಂತೆ ಸೂಕ್ತ ವ್ಯವಸ್ಥೆ ಮಾಡತಕ್ಕದ್ದು. ಇದಕ್ಕೆ ಅನುಗುಣವಾಗಿ ಬ್ಯಾರಿಕೇಡಿಂಗ್ ನ್ನು ಅಳವಡಿಸಿ ನಿರ್ಮಾಣ ಕಾರ್ಯ ಕೈಗೊಳ್ಳತಕ್ಕದ್ದು.

17) ಯೋಜನೆಯಲ್ಲಿ ಘನ ತ್ಯಾಜ್ಯಗಳನ್ನು ಪ್ಲಾಸ್ಟಿಕ್ ಹಾಗೂ ಇತ್ಯಾದಿಯಾಗಿ ವಿಂಗಡಿಸಿ Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು ಹಾಗೂ ನಿಗಧಿತ ಸ್ಥಳ ಸಾಗಿಸಲು ಸೂಕ್ತ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಿಕೊಳ್ಳತಕ್ಕದ್ದು.

18) ಕಟ್ಟಡದ ಕಾಮಗಾರಿ ಆರಂಭಿಸುವ ಮುನ್ನ ಅರ್ಜಿದಾರರು ಖಾತಾ ಅನ್ನು ಸ್ಥಳೀಯ ಸಂಸ್ಥೆಯಿಂದ ಪಡೆಯತಕ್ಕದ್ದು.

19) ಕಾರ್ಯದರ್ಶಿ, ಕಾರ್ಮಿಕ ಇಲಾಖೆ ರವರ ಪತ್ರ ದಿನಾಂಕ: 04-03-2006 ರ ಪತ್ರದಲ್ಲಿ ವಿಧಿಸಿರುವ ಷರತ್ತುಗಳಿಗೆ ಅಭಿವೃದ್ಧಿದಾರರು ಬದ್ಧರಾಗಿರತಕ್ಕದ್ದು.

20) ಕಟ್ಟಡ ನಿರ್ಮಾಣ ಸಮಯದಲ್ಲಿ ಸೆಂಟರಿಂಗ್ ಅಥವಾ ಇನ್ನಿತರೇ ಕಾರಣಗಳಿಂದ ಏನಾದರೂ ಅನಾಹುತ ಸಂಭವಿಸಿದ್ದಲ್ಲಿ ಅದಕ್ಕೆ ಅಭಿವೃದ್ಧಿದಾರರೇ ಜವಬ್ದಾರರಾಗಿರುತ್ತಾರೆ. ನಕ್ಷೆ ಮಂಜೂರು ಮಾಡಿದ ಯಾವುದೇ ಇಲಾಖೆ / ಸಂಸ್ಥೆಯು ಜವಬ್ದಾರರಾಗಿರುವುದಿಲ್ಲ.

21) ಅಭಿವೃದ್ಧಿದಾರರ ನಕ್ಷೆ ಅನುಮೋದನೆ ಸಂಬಂಧ ಜಮೀನಿನ ಮಾಲಿಕತ್ವದ ಬಗ್ಗೆ ಯಾವುದೇ ತಪ್ಪು ಮಾಹಿತಿ / ದಾಖಲಾತಿ ನೀಡಿದ್ದಲ್ಲಿ ಅರ್ಜಿದಾರರಿಗೆ ಯಾವುದೇ ಮುನ್ಸೂಚನೆ ನೀಡದೆ ನಕ್ಷೆ ಅನುಮೋದನೆಯು ತನ್ನಿಂತಾನೇ ರದ್ದಾಗುತ್ತದೆ ಹಾಗೂ ಕಾನೂನು ರೀತ್ಯಾ ಸೂಕ್ತ ಕ್ರಮಕೈಗೊಳ್ಳಲಾಗುವುದು.

22) ಅಭಿವೃದ್ಧಿದಾರರು ಕುಡಿಯುವ ನೀರಿನ ಸರಬರಾಜಿಗಾಗಿ ಸಂಬಂಧಪಟ್ಟ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯನ್ನು ಅವಲಂಬಿಸದೆ ನೀರಿನ ಸರಬರಾಜಿಗಾಗಿ ತಮ್ಮ ಸ್ವಂತ ವ್ಯವಸ್ಥೆಯನ್ನು ಮಾಡಿಕೊಳ್ಳತಕ್ಕದ್ದು.


23) ಅಭಿವೃದ್ಧಿದಾರರು ಬೆಟರ್ ಮೆಂಟ್ ತೆರಿಗೆ ಪಾವತಿಸುವ ಕುರಿತು ಮಾನ್ಯ ಉಚ್ಛ ನ್ಯಾಯಾಲಯದ ನೀಡುವ 45727-45730/2011 (ಬೆಂಅಪ್ರಾ), ದಿನಾಂಕ: 03.09.2012ರ ತೀರ್ಮಾನದ ವಿರುದ್ಧ ಪ್ರಾಧಿಕಾರವು ಮೇಲ್ಮನವಿ ಸಲ್ಲಿಸಲು ತೀರ್ಮಾನಿಸಿದ್ದು, ಮೇಲ್ಮನವಿಯ ಕುರಿತು ನ್ಯಾಯಾಲಯ ನೀಡುವ ತೀರ್ಪಿಗೆ ಬದ್ಧರಾಗಿರಲು ಷರತ್ತಿಗೆ ಒಳಪಡಿಸಲಾಗಿದೆ.

24) ಅಭಿವೃದ್ಧಿದಾರರು ಕಟ್ಟಡದ ಕಾಮಗಾರಿ ಪ್ರಾರಂಭಿಸುವ ಮುನ್ನ ಸದರಿ ಕಟ್ಟಡಗಳಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರುಗಳಿಗೆ ಶೌಚಾಲಯಗಳನ್ನು ಕಡ್ಡಾಯವಾಗಿ ನಿರ್ಮಿಸತಕ್ಕದ್ದು ಹಾಗೂ ಸದರಿ ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಇಲ್ಲವಾದಲ್ಲಿ ಸದರಿ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲಾಗುವುದಿಲ್ಲ ಹಾಗೂ ನೀಡಲಾಗಿರುವ ನಕ್ಷೆ ಮಂಜೂರಾತಿಯನ್ನು ಯಾವುದೇ ಮುನ್ಸೂಚನೆಯಿಲ್ಲದೆ ರದ್ದುಪಡಿಸಲಾಗುವುದು.

12/10/2018

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

ಯಥಾಪ್ರತಿಯನ್ನು ಕಾರ್ಯಪಾಲಕ ಅಭಿಯಂತರು, ಪೂರ್ವ ವಿಭಾಗ, ಬಿ.ಡಿ.ಎ. ವಾಣಿಜ್ಯ ಸಂಕೀರ್ಣ, ಹೆಚ್.ಎಸ್.ಆರ್. ಬಡಾವಣೆ, ಬೆಂಗಳೂರು ರವರ ಮಾಹಿತಿಗಾಗಿ ರವಾನಿಸಿದೆ.


MARQ
AREA STATEMENT
F.A.R. CALCULATION
BLOCK-J UNIT MATRIX
BLOCK-K UNIT MATRIX
SUMMARY OF UNITS AND CAR PARKING
GRAND TOTAL
KOLAR MAIN ROAD
KANNAMANGALA VILLAGE
MIMS ARDENDALE II
AWHO KANNAMANGALA (WHITEFIELD) PROJECT
WHITEFIELD-HOSKOTE MAIN ROAD
WHITEFIELD
VACANT LAND
BUILDING-1
APPROVED
BLDG. PLAN SANCTION NO.
BDA/LP/EM/EO-03/TA-4/E/52/2015-16
FUTURE EXPANSION
PRIVATE PROPERTY
KEY PLAN
DOOR-WINDOW SCHEDULE
SERVICE SHAFT SCHEDULE
LEGEND
BUILDING FOOTPRINT
PODIUM ROOF @ +105.05M LVL
ROOF @100.40M LVL (DRIVEWAY)
CLUBHOUSE FOOTPRINT
PARKS & OPEN SPACES
ARCHITECT SIGNATURE:
NAME: [AJIT V.JAIN]
LIC. NO.: (BMP/BL/3.2.3/A-886/2000-2001)
CLIENT NAME:
Assetz
ASSETZ WHITEFIELD HOMES PVT. LTD.
EMBASSY ICON ANNEXE
INFANTRY ROAD
BANGALORE - 560001
PROJECT TITLE:
PROPOSED RESIDENTIAL DEVELOPMENT PLAN AT WHITEFIELD
(ASSETZ - 'MARQ' - PHASE-2)
PROJECT ADDRESS:
SyNo:159/1,159/2,160/1,
167/1,167/2,167/3/167/4,160/1,168,
169/1,169/2,169/3,169/4,171;
Kannamangala Village,
Whitefield - Hoskote Road
Bangalore - 560067
ARCHITECT:
PRAXIS INC.
18, Srinivagilu Main Road
Ejipura, Bangalore - 560047
Tel + 91 80 22741249/ 50
Fax + 91 80 42091739
E- Mail : admin@cmsmpraxis.com
www.praxis-india.com
SANCTION DRAWING
DRAWING TITLE:
SITE PLAN
ORIENTATION:
N
DRAWN/CHECKED:
DESIGNED:
APPROVED:
DRAWING No:
DATE: 07.08.2018
SCALE: 1:600
SHEET:
REV
R0
SHEET 1 OF 16
ಒಟ್ಟು ರೂಗಳಲ್ಲಿ
33,21,945.00
35,46,045.00
1,75,220.00
51,64,518.00
36,91,050.00
1,60,000.00
1,60,58,778.00
6,48,289.00
6,48,289.00
1,73,55,356.00